ದಿನಾಂಕ 17-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯವರ ಪರವಾಗಿ ಶ್ರೀ ಡಿ. ಬಿ. ಎಸ್ ವಕೀಲರವರಿಂದಃ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಸೂಡದಲ್ಲಿ ಕೃಷಿ ಕೆಲಸ ಮಾಡುತ್ತೇನೆ. ಈ ದಾವೆ ಮಾಡಲು ನಾನು ಮಾಹಿತಿ ನೀಡಿರುತ್ತೇನೆ. ನಾನು ಮಾಹಿತಿ ನೀಡುವಾಗ ನಮ್ಮ ಆಡಳಿತ ಮಂಡಳಿಯ ಸದಸ್ಯರು ಶಶಿಧರ್ ರಾವ್, ಉಮೇಶ್ ಪ್ರಭು, ಪಾಂಡುರಂಗ, ಸುರೇಂದ್ರ ನಾಯಕ್, ಸಂತೋಷ ವಾಗ್ಲೆ, ದೇವದಾಸ್ ಪಾಟ್ಕರ್ ಇದ್ದರು. ಇವರನ್ನು ಹೊರತುಪಡಿಸಿ ಬೇರೆ ಸದಸ್ಯರು ಇರಬಹುದು ನನಗೆ ಈಗ ನೆನಪು ಬರುತ್ತಾ ಇಲ್ಲ. ಈ ವ್ಯಾಜ್ಯ ಮಾಡಲು 27-06-2023 ರಂದು ನಿರ್ಣಯ ಮಾಡಿರುತ್ತೇವೆ. ಈ ವ್ಯಾಜ್ಯ ಮಾಡುವ 10 ದಿನದ ಮೊದಲು ನಾನು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ಮಾಹಿತಿ ಕೊಡುವ ಸಮಯದಲ್ಲಿ ನಮ್ಮ ಆಡಳಿತ ಮಂಡಳಿಯಲ್ಲಿ ನಿರ್ಣಯ ಆಗಿತ್ತು. ಈ ಪ್ರಕರಣವನ್ನು ದಾಖಲು ಮಾಡಿದ್ದು ದಿನಾಂಕ 27-06-2023 ರಂದು ಮಾಡಿರುತ್ತೇವೆ. ಈ ಪ್ರಕರಣದ ದಾಖಲಾಗುವ ಮುಂಚೆ ನಿರ್ಣಯ ಮಾಡಿದ ಬಗ್ಗೆ ದಾಖಲಾತಿ ಇರಬಹುದು. ನನಗೆ ದಾವಾ ಮಾಡಲು ದಿಃ 27-06-2023 ರಂದು ಜವಾಬ್ದಾರಿ ನೀಡಿರುತ್ತಾರೆ. ನನಗೆ ದಾವಾ ಮಾಡಲು ಆಡಳಿತ ಮಂಡಳಿಯವರು ಯಾವುದೇ ರೀತಿಯ ನಿರ್ಣಯ ಮಾಡಿಲ್ಲ ಎಂದರೆ ಸರಿಯಲ್ಲ.

ದುರ್ಗಾಪರಮೇಶ್ವರಿ ದೇವಸ್ಥಾನ ಎಂಡೋಮೆಂಟ್ ಅಲ್ಲ. ನಮ್ಮ ಸಮಾಜಕ್ಕೆ ಸೇರಿದ ದೇವಸ್ಥಾನವಾಗಿರುತ್ತದೆ. ಸರ್ವೆ ನಂಬ್ರ 10 ರಲ್ಲಿ 6.50 ಎಕರೆಯವರೆಗೆ ಭೂಮಿ ದೇವರ ಹೆಸರಿನಲ್ಲಿ ಇದೆ. ಸದ್ರಿ ದೇವಸ್ಥಾನ ಶಿರ್ವ ಗ್ರಾಮದಲ್ಲಿ ಇದೆ. ಸದ್ರಿ ವಿಷಯ ಸಾಬೀತು ಪಡಿಸಲು ಆರ್ ಟಿ ಸಿ ಹಾಜರು ಮಾಡಲು ಏನು ತೊಂದರೆ ಇಲ್ಲ.

ದೇವಸ್ಥಾನದ ಹೆಸರಿನಲ್ಲಿ ಇರುವ ಆರ್ ಟಿ ಸಿ 1 ನೇ ವಾದಿಯ ಸ್ವಾದೀನದಲ್ಲಿ ಇರುತ್ತದೆ. ದೇವಸ್ಥಾನಕ್ಕೆ ಸಂಬಂದಪಟ್ಟ ಜಮೀನಿಗೆ ತೆರಿಗೆ ಮಾತ್ರ ಕಟ್ಟುತ್ತೇವೆ.

ಈ ವ್ಯಾಜ್ಯವನ್ನು ಹಾಕಲು ಕಾರಣವೇನೆಂದರೆ ಯಶೋದಮ್ಮ ನವರ ಜಮೀನು ದೇವಸ್ಥಾನಕ್ಕೆ ವಿಲ್ ಮೂಲಕ ನೀಡಿದ್ದು ಅದು ದೇವಸ್ಥಾನದ ಸ್ವಾದೀನಕ್ಕೆ ಬರಬೇಕೆಂದು ವ್ಯಾಜ್ಯ ಮಾಡಿರುತ್ತೇನೆ. ಸದ್ರಿ ಜಮೀನಿನಿಂದ ದೇವಸ್ಥಾನ ಸುಮಾರು ಒಂದು ಕಿ. ಮೀ ದೂರದಲ್ಲಿ ಇದೆ. ಎಲ್ಲಾ ಜಮೀನು ನಂಜ ಭೂಮಿಯಾಗಿದೆ. ದೇವಸ್ಥಾನದವರು ಸದ್ರಿ ಜಮೀನಿನಲ್ಲಿ ಎಂದೂ ಸಾಗುವಳಿ ಮಾಡಿಲ್ಲ. ಪ್ರತಿವಾದಿಯವರು ನಾನು ಹೇಳುವ ಯಶೋದಮ್ಮನವರ ಕುಟುಂಬಸ್ಥರು ಎಂದರೆ ಸರಿ. ಯಶೋದಮ್ಮನವರು ತೀರಿಕೊಂಡ ನಂತರ ಅವರ ಕುಟುಂಬದವರು ಸದ್ರಿ ಜಮೀನನ್ನು ಅನುಭವ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವು ಸದ್ರಿ ಜಮೀನಿಗೆ ಹೋಗಿ ಬರುತ್ತೇವೆ. ಸದ್ರಿ ಜಮೀನಿಗೆ ನಾವು ಹೋಗಿ ಬರುತ್ತೇವೆ ಎನ್ನುವ ಬಗ್ಗೆ ದೇವಸ್ಥಾನ ದಲ್ಲಿ ಯಾವುದೇ ಕಡತ ಇಲ್ಲ. ನನ್ನ ಪ್ರಕಾರ ಯಶೋದಮ್ಮನವರು ದಿನಾಂಕ 04-09-2019 ರಂದು ತೀರಿಕೊಂಡಿರುತ್ತಾರೆ. ಅವರ ಅಂತ್ಯ ಕ್ರಿಯೆಯನ್ನು ದೇವಸ್ಥಾನದವರು ಮಾಡಿಲ್ಲ. ಸಾಕ್ಷಿದಾರರು ಮುಂದುವರಿದು ಅವರ ಸಂಬಂದಿಕರು ಮಾಡಿದ್ದಾರೆ, ಕುಟುಂಬದವರು ಮಾಡಿಲ್ಲ. ಕುಟುಂದವರು ಕೂಡ ಸಂಬಂದಿಕರಲ್ಲಿ ಬರುತ್ತಾರೆ ಎಂದರೆ ಸರಿ. ಪ್ರತಿವಾದಿಯವರು ಯಶೋದಮ್ಮ ನವರ ಅಂತ್ಯಕ್ರಿಯೆ ಮಾಡಿರುತ್ತಾರೆ. ಅವರ ಸಂಬಂದಿಕರು ಅಂತ್ಯಕ್ರಿಯೆ ಮಾಡಿದ್ದಾರೆ ಕುಟುಂಬದವರು ಮಾಡಿಲ್ಲ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಯಶೋದಮ್ಮ ನವರ ಅಂತ್ಯಕ್ರಿಯೆ ಯಲ್ಲಿ ನಮ್ಮ ದೇವಸ್ಥಾನದ ಆಡಳಿತ ಮಂಡಳಿಯ ಸದ್ಯರು ಭಾಗವಹಿಸಿರುತ್ತಾರೆ.

ನಮ್ಮ ದೇವಸ್ಥಾನದಲ್ಲಿ ಯಾರಾದರೂ ತೀರಿಕೊಂಡರೆ ನಮ್ಮ ಆಡಳಿತ ಮಂಡಳಿಯಿಂದ ಶ್ರದ್ದಾಂಜಲಿ ಸಭೆ ಮಾಡುತ್ತೇವೆ. ಯಶೋದಮ್ಮ ನವರು ತೀರಿಕೊಂಡ ನಂತರ ವೈಕುಂಟ ಸಮಾರಂಭದಲ್ಲಿ ಪುಷ್ಪಾಂಜಲಿ ಮಾಡಿರುತ್ತಾರೆ. ಸದ್ರಿ ಪ್ರಕ್ರಿಯೆ ದೇವಸ್ಥಾನದಲ್ಲಿ ಆಗಿತ್ತು. ವೈಕುಂಟ ಸಮಾರಂಭದಲ್ಲಿ ಪುಷ್ಪಾಂಜಲಿಯನ್ನು ಮೃತರಿಗೆ ಸಂಬಂದಪಟ್ಟವರೇ ಸಾಮಾನ್ಯವಾಗಿ ಮಾಡುತ್ತಾರೆ. ಯಶೋದಮ್ಮ ತೀರಿಕೊಂಡ ನಂತರ ವೈಕುಂಟ ಸಮಾರಾದನೆಯಲ್ಲಿ ಪುಷಾಂಜಲಿಯನ್ನು ಅವರ ಸಂಬಂದಿಕರು ಮಾಡಿರುತ್ತಾರೆ. ಯಶೋದಮ್ಮ ತೀರಿಕೊಂಡ ನಂತರ ನಮ್ಮ ದೇವಸ್ಥಾನದ ವತಿಯಿಂದ ಯಾವುದೇ ಶ್ರದ್ದಾಂಜಲಿ ಸಭೆ ಮಾಡಿರುವುದಿಲ್ಲ.

ಯಶೋದಮ್ಮನವರು ತನ್ನ ಜೀವಿತಾವದಿಯಲ್ಲಿ ನಮ್ಮ ದೇವಸ್ಥಾನಕ್ಕೆ ಚಿನ್ನ ಮತ್ತು ಹಣವನ್ನು ನೀಡಿರುತ್ತಾರೆ. ಆ ಬಗ್ಗೆ ದಾಖಲೆ ಇರುವುದಿಲ್ಲ. ಯಶೋದಮ್ಮನವರು ವಿಲ್ ಬರೆದಿರುತ್ತಾರೆ ಎಂಬ ವಿಷಯ ಬಗ್ಗೆ ದೇವದಾಸ್ ಪ್ರಭು ರವರು ಯಶೋದಮ್ಮನವರು ತೀರಿಕೊಂಡ 5-6 ತಿಂಗಳ ನಂತರ ಸದ್ರಿ ವಿಲ್ಲನ್ನು ನನಗೆ ತಂದು ಕೊಟ್ಟು ವಿಷಯ ತಿಳಿಸಿರುತ್ತಾರೆ. ದೇವದಾಸ್ ಪ್ರಭು ರವರು ಶಿರ್ವ ಗ್ರಾಮದ ಮಟ್ಟಾರ್ ವಠಾರದವರು. ದೇವದಾಸ್ ಪ್ರಭು ರವರು ಈಗ ನಮ್ಮ ಆಡಳಿತ ಮಂಡಳಿಯ ಸದಸ್ಯರಲ್ಲ ಹಿಂದೆ ಸದಸ್ಯರಾಗಿದ್ದರು. ಯಶೋದಮ್ಮನವರು ವಾಸಮಾಡುತ್ತಿರುವ ಮನೆಗೂ ಮತ್ತು ದೇವದಾಸ್ ಪ್ರಭು ವಾಸ ಮಾಡುತ್ತಿರುವ ಮನೆಗೂ ಅಂದಾಜು 5 ಕಿ. ಮೀ ದೂರ ಇತ್ತು. ದೇವದಾಸ್ ಪ್ರಭು ರವರು ಯಶೋದಮ್ಮನವರಿಗೆ ಸಂಬಂದಿಕರು. ದೇವದಾಸ್ ಪ್ರಭುರವರು ಯಶೋದಮ್ಮನವರಿಗೆ ಸಂಬಂದಿಕರು ಎಂದು ವಿಲ್ ನನಗೆ ಕೊಡುವ ಹಿಂದೆ ನನಗೆ ಗೊತಿತ್ತು. ಯಾವ ರೀತಿಯ ಸಂಬಂದ ಎಂದು ನನಗೆ ಗೊತ್ತಿಲ್ಲ.

ಯಶೋದಮ್ಮ ಮತ್ತು ದೇವದಾಸ್ ಪ್ರಭು ನಡುವೆ ಅನ್ಯೋನ್ಯತೆ ಇರಬಹುದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಯಶೋದಮ್ಮ ನವರ ಅಂತ್ಯಕ್ರಿಯೆ ಸಮಯದಲ್ಲಿ ದೇವದಾಸ್ ಪ್ರಭುರವರು ಭಾಗವಹಿಸಿದ್ದರು, ನಾನು ವೈಯಕ್ತಿವಾಗಿ ಯಶೋದಮ್ಮನವರ ಅಂತ್ಯಕ್ರಿಯೆ ಸಮಯದಲ್ಲಿ ಭಾಗಿಯಾಗಿಲ್ಲ. ದೇವದಾಸ್ ಪ್ರಭುರವರು ಅಂತ್ಯಕ್ರಿಯೆ ಸಮಯದಲ್ಲಿ ಭಾಗಿಯಾಗಿದ್ದಾರೆ ಎಂಬ ಮಾಹಿತಿಯನ್ನು ಆಡಳಿತ ಮಂಡಳಿಯ ಸದಸ್ಯರಾದ ಶಶಿಧರ ವಾಗ್ಲೆ ತಿಳಿಸಿರುತ್ತಾರೆ. ಯಶೋದಮ್ಮನವರು ಮಾಡಿದ ವಿಲ್ಲನಲ್ಲಿ ಯಾವುದೇ ವಾಚಕ ಇರುವುದಿಲ್ಲ ಆದರೆ ಅವರು ಸದ್ರಿ ವಿಲ್ಲಿಗೆ ಸಾಕ್ಷಿದಾರರಾಗಿರುತ್ತಾರೆ. ದೇವದಾಸ್ ಪ್ರಭುರವರು ಭಕ್ತರಾಗಿ ಬರುತ್ತಾರೆ. ದೇವಸ್ಥಾನದ ಜೀರ್ಣೋದ್ದಾರ ಸಮಯದಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಾರೆ. ನನ್ನ ಪ್ರಕಾರ ದೇವದಾಸ್ ಪ್ರಭುರವರಿಗೆ ನಮ್ಮ ದೇವಸ್ಥಾನ ದ ಬಗ್ಗೆ ತುಂಬಾ ಕಾಳಜಿ ಇರುತ್ತದೆ.

ಯಶೋದಮ್ಮನವರ ಉತ್ತರ ಕ್ರಿಯೆಯಲ್ಲಿ ನಾನು ಭಾಗವಹಿಸಿಲ್ಲ ಆದರೆ ದೇವದಾಸ್ ಪ್ರಭು ಹೋಗಿದ್ದರು. ಯಶೋದಮ್ಮನವರು ತೀರಿಕೊಂಡ 6 ತಿಂಗಳ ನಂತರ ವಿಲ್ ದೇವದಾಸ್ ಪ್ರಭು ತಂದಕೊಟ್ಟ ನಂತರವೇ ವಿಲ್ಲಿನ ವಿಷಯ ನಮಗೆ ಗೊತ್ತಾಗಿರುತ್ತದೆ. ಯಶೋದಮ್ಮನವರು ತೀರಿಕೊಂಡ ನಂತರ ಮತ್ತು ವಿಲ್ ನಮಗೆ ತಂದು ಕೊಡುವ ಸದ್ರಿ ಮಧ್ಯದ ಅವದಿಯಲ್ಲಿ ದೇವದಾಸ್ ಪ್ರಭು ರವರು ಸಕ್ರಿಯವಾಗಿ ದೇವಸ್ಥಾನ ದ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ಆ ಸಮಯದಲ್ಲಿ ದೇವದಾಸ್ ಪ್ರಭು ರವರು ಯಶೋದಮ್ಮ ನವರ ಬಗ್ಗೆ ನನ್ನೊಡನೆ ಸಮಾಲೋಚನೆ ಮಾಡಿರುವುದಿಲ್ಲ ಆದರೆ ಆಡಳಿತ ಮಂಡಳಿಯ ಸದಸ್ಯರ ಜೊತೆ ಮಾತನಾಡಿರಬಹುದು ನನಗೆ ನಿಖರವಾಗಿ ಗೊತ್ತಿಲ್ಲ. ದೇವದಾಸ್ ಪ್ರಭು ರವರು ಸದ್ರಿ ವಿಲ್ ನನ್ನ ಕೈಯಲ್ಲಿ ಕೊಟ್ಟಿರುವುದಿಲ್ಲ. ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರಿಗೆ ಕೊಟ್ಟಿರುತ್ತಾರೆ.

ಆ ಸದಸ್ಯರಲ್ಲಿ ಯಾವ ವ್ಯಕ್ತಿಗೆ ನೀಡಿರುತ್ತಾರೆ ಎಂಬ ಬಗ್ಗೆ ನನಗೆ ನಿಖರ ಮಾಹಿತಿ ಇಲ್ಲ. ದೇವದಾಸ್ ಪ್ರಭು ರವರು ಸದ್ರಿ ವಿಲ್ಲನ್ನು ಆಡಳಿತ ಮಂಡಳಿಗೆ ನೀಡಿದ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ನಾನು ಹಾಕಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಅಥಾವ ದಾವಾ ಪತ್ರದಲ್ಲಾಗಲೀ ಸದ್ರಿ ಮಾಹಿತಿ ನಾನು ನೀಡಿರುವುದಿಲ್ಲ. ವಿಲ್ ನಾಮೆ ನಮ್ಮ ಸ್ವಾಧೀನಕ್ಕೆ ಬಂದಿದ್ದ ಬಗ್ಗೆ ನಮ್ಮ ಆಡಳಿತ ಮಂಡಳಿಯಿಂದ ರೆಸೊಲ್ಯೂಷನ್ ಆಗಿರುತ್ತದೆ. ಸದ್ರಿ ರೆಸೊಲ್ಯೂಷನ್ ಬರವಣಿಯಲ್ಲಿ ಆಗಿರುತ್ತದೆ. ಅದನ್ನು ಕಮಿಟಿ ಸದಸ್ಯರ ಜೊತೆ ಮಾತನಾಡಿ ಹಾಜರು ಪಡಿಸಬಹುದು. ಯಶೋದಮ್ಮ ನವರು ಮಾಡಿದ ಜಮೀನು ಸಂಬಂದಿತ ವಿಲ್ ನಮಗೆ ದೊರೆತ ನಂತರ ಸದ್ರಿ ಜಮೀನಿಗೆ ನಾವು ಭೂ ತೆರಿಗೆ ಕಟ್ಟಿರುವುದಿಲ್ಲ. ಸದ್ರಿ ನಮ್ಮ ಹೆಸರಿನಲ್ಲಿ ಆಗಿಲ್ಲ ಆದ್ದರಿಂದ ತೆರಿಗೆ ನಾವು ಕಟ್ಟಲಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

1 ನೇ ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.